International Journal of Kannada Research
www.kannadajournal.com

ISSN: 2454–5813
IJKR 2018; 4(2): 70-72
© 2018 IJKR
www.kannadajournal.com
Received: 15-02-2018
Accepted: 16-03-2018

ಡಾ॥ ಚನ್ನಮ್ಮ. ಎನ್.ಅಲ್ಲಾ
ಎಂ.ಎ.ಪಿಎಚ್.ಡಿ. ಪ್ರಾಚಾರ್ಯರು,
ಬಸವ ವಿಜ್ಞಾನ ಮತ್ತು ವಾಣಿಜ್ಯ
ಪದವಿ ಮಹಾವಿದ್ಯಾಲಯ,
ಕಲಬುರಗಿ

# ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಡಂಬನೆ

**ಡಾ॥ ಚನ್ನಮ್ಮ. ಎನ್.ಅಲ್ಲಾ**

ಕನ್ನಡ ನಾಡಿನ ಸಾಹಿತ್ಯಲೋಕದಲ್ಲಿ ಹನ್ನೆರಡನೆಯ ಶತಮಾನದ ಶರಣರ ವಚನಗಳು ಹೇಗೆ ಜನಮನವನ್ನು ಸೂರೆಗೊಂಡವೊ ಹಾಗೆಯೇ ನಂತರದಲ್ಲಿ ಬಂದ ದಾಸರ ಕೀರ್ತನೆಗಳು ಜನರ ನಾಲಿಗೆಯ ಮೇಲೆ ನಲಿದಾಡಿದವು, ಇಂದಿಗೂ ನಲಿದಾಡುತ್ತಿವೆ. ಕನ್ನಡ ಸಾಹಿತ್ಯದಿಂದ ಬೇರ್ಪಡಿಸಲಾಗದಷ್ಟು ಇವೆರಡೂ ಪ್ರಕಾರಗಳು ಸಮರಸವಾಗಿರುವುದು ಅವುಗಳ ವೈಶಿಷ್ಟ್ಯ. ಹೀಗಾಗಿಯೇ ವಚನ ಹಾಗೂ ಕೀರ್ತನ ಸಾಹಿತ್ಯ ಕನ್ನಡಮ್ಮನ ಎರಡು ಕಣ್ಣುಗಳು ಎಂಬ ಮಾತು ಮೂಡಿ ಬಂದಿದೆ.

ಶರಣರ ವಚನ ರಚಿಸಿದರೆ ದಾಸರು ಕೀರ್ತನೆ ರಚಿಸಿದರು. ಹಾಡು, ಪಲ್ಲವಿ, ರಾಗ, ತಾಳ, ಲಯ, ಸಂಗೀತ ಅಳವಡಿಸಿಕೊಂಡು ತಾಳ ತಂಬೂರಿ ಹಿಡಿದು ಮನೆ ಮನೆಗೆ ಹೋದದ್ದು ಸತ್ಯ ಸಂಗತಿ, ಇಂತಹ ದಾಸ ಪರಂಪರೆಯ ಅಗ್ರಗಣ್ಯನಾದ ಆದರ್ಶ ಸಂತ, ಕಲಿಕವಿ, ಭಕ್ತಸಂತ, ದಾಸರದಾಸ, ದಾಸವರಣ್ಣ ಗುರುಶಿಷ್ಯ ಪರಂಪರೆಯ ಸೇತುವೆ, ಭಕ್ತಿರಸದ ಸಂಗಮವಕವಿ, ದಾರ್ಶನಿಕ, ಚಿಂತಕ, ಅನುಭಾವಿ ಕವಿ ಎಂದು ಹೇಳುತ್ತಾ ಕನಕನೊಬ್ಬ ಮಾನವೀಯ ನೆಲೆಯ ಹರಿಕಾರ, ದಾಸ ಸಾಹಿತ್ಯದಲ್ಲಿ ಬಹುಮುಖ್ಯವಾದವರು ಕನಕದಾಸರು ಕೀರ್ತನೆ, ಸುಳಾದಿ ಉಗಾಭೋಗ, ಮುಂಡಿಗೆಗಳನ್ನು ರಚಿಸಿದ್ದಲ್ಲದೆ ಸಾಂಗತ್ಯ, ಕಾವ್ಯ ಭಾಮಿನಿ ಷಟ್ಪದಿ ಕಾವ್ಯ ರಚಿಸಿದ್ದು ದಾಸರಲ್ಲಿ ಅಪರೂಪದ ದಾಸರೆಂದು ಸಾಬೀತಾಗಿದ್ದಾರೆ. ಹರಿಭಕ್ತಿ ನೆಲೆಯಲ್ಲಿಯೇ ಆಧ್ಯಾತ್ಮದ ಶಿಖರ ಏರಿದವರು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನಕದಾಸರ ಸ್ಥಾನ ತುಂಬಾ ಎತ್ತರದ್ದು. ಅವರು ಕವಿ ಮಾತ್ರವಲ್ಲ ಕಲಿಯೂ ಹಾದು, ಕಲಿ–ಕವಿಯಾಗಿ ಹೆಸರಾಂತ ಆದಿಕವಿ ಪಂಪನಂತೆ ಸಂಸಾರಿಯಾಗಿ, ಸಂತರಾಗಿ, ಭಕ್ತಶ್ರೇಷ್ಠರಾಗಿ, ಕೀರ್ತನಕಾರರಾಗಿ ಎಲ್ಲಕ್ಕಿಂತ ಹೆಚ್ಚಾಗಿ ಜೀವನದ ಅರ್ಥವನ್ನು ಶೋಧಿಸುವ ಕವಿಯಾಗಿ, ಕೀರ್ತನೆಗಳ ಮೂಲಕ ಸಮಾಜದ ಸುಧಾರಣೆಯ ಪ್ರವರ್ತಕರಾಗಿದ್ದಾರೆ.

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಈ ಸಮಾಜದಲ್ಲಿ ನಡೆಯುವಂತ ಆಗುಹೋಗುಗಳ ಬಗ್ಗೆ ವಿವರಿಸಿದ್ದಾರೆ. ಜನರ ನಡವಳಿಕೆ, ಸಮಾಜದಲ್ಲಿ ಬೇರು ಬಿಟ್ಟ ರೂಢಿ– ಸಂಪ್ರದಾಯಗಳು ಮೇಲು–ಕೀಳು, ಜಾತಿ–ಮತ, ವ್ಯವಸ್ಥೆ ಜೀವನದ ಆಡಂಬರ, ಡಾಂಬಿಕತೆ ಮೊದಲಾದ ವಿಚಾರಗಳನ್ನು ವಿಡಂಬಿಸುವ ರೀತಿ ಅನನ್ಯವಾದುದು, ಈ ವಿಡಂಬನೆ ಕನಕದಾಸರ ಹಾಡುಗಳ ಜೀವಾಳವೆನ್ನಬಹುದು. ಬಹುಶಃ ಡಾಂಬಿಕತೆಯನ್ನು ಕನಕದಾಸರಷ್ಟು ಸೂಕ್ಷ್ಮ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡ ಕವಿ ಮತ್ತೊಬ್ಬರಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ ಕನಕದಾಸರು ವಾಸ್ತವ ಸಂಗತಿಯ ಕಠೋರ ಸತ್ಯವನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸುವ ಮೂಲಕ ಮಾನಸಿಕ ಕೇಶವನ್ನು ಒರೆಗೆ ಹಚ್ಚುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ಸಮಾಜದಲ್ಲಿನ ಜಾತಿಯ ಕುರಿತು ಬಹುಮಾರ್ಮಿಕವಾಗಿ ಅಷ್ಟೇ ಸಾಮಾಜಿಕ ಕಳಕಳಿಯಿಂದ ಚಾಟಿಏಟು ಬೀಸಿದವರು ಕನಕದಾಸರು, ಜಾತಿ, ಕುಲವೆಂದು ಕಚ್ಚಾಡುವ ಜನರನ್ನು ಕುರುತು.

ಕುಲಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರ
ಹುಟ್ಟದ ಯೋನಿಗಳಿಲ್ಲ ಮೆಟ್ಟ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಾಂಡ್ಯ ಮನುಜ

Correspondence
ಡಾ॥ ಚನ್ನಮ್ಮ. ಎನ್.ಅಲ್ಲಾ
ಎಂ.ಎ.ಪಿಎಚ್.ಡಿ. ಪ್ರಾಚಾರ್ಯರು,
ಬಸವ ವಿಜ್ಞಾನ ಮತ್ತು ವಾಣಿಜ್ಯ
ಪದವಿ ಮಹಾವಿದ್ಯಾಲಯ,
ಕಲಬುರಗಿ

ಕುಲದ ಬಗೆಗಿನ ಕನಕದಾಸರ ಈ ನುಡಿಗಳು ಎಲ್ಲಾ ಕಾಲಕ್ಕೂ ಮೌಲ್ಯವಾಗಿ ಉಳಿಯುವಂಥವು, ಜೊತೆಗೆ ಈ ಕೀರ್ತನೆಯ ಉಲ್ಲೇಖ ನಮ್ಮ ಸಾಮಾಜಿಕ ಚಿಂತನೆಯ ಸ್ವರೂಪವನ್ನು ಪ್ರಕಟಿಸಲು ನೆರವಾಗುತ್ತದೆ. ಮೇಲು-ಕೀಳು, ಉಚ್ಚ-ನೀಚ ಎಂಬ ಭಾವನೆಗಳನ್ನು ಕನಕದಾಸರು ವಿರೋಧಿಸಿದ್ದರು. ಕುಲದ ನೆಲೆಯನ್ನು ಅರಿಯಲು ಸಾಧ್ಯವಿಲ್ಲ. ನಾವು ಜನಿಸುವ ಜನ್ಮದ್ವಾರ, ವಾಸಿಸುವ ಭೂಮಿ, ಕುಡಿಯುವ ನೀರು, ಬೀಸುವ ಗಾಳಿ, ತಿನ್ನುವ ಆಹಾರ, ಬಟ್ಟೆಗಳೆಲ್ಲವೂ ಒಂದೇ ಅಂದ ಮೇಲೆ ನಮ್ಮಲ್ಲಿ ಯಾಕೆ ಮೇಲು-ಕೀಳೆಂಬ ಭೇದ? ಎಂದು ಪ್ರಶ್ನಿಸಿದರು, ಸರ್ವೋತ್ತಮನೂ, ಸರ್ವೇಶ್ವರನೂ ಆದ ಶ್ರೀ ಹರಿಯನ್ನು ಸರ್ವಮಯನೆಂದು ತಿಳಿದು ಅವನ ಚರಣಕಮಲ ನೆನೆದು ಸ್ತುತಿಸುವರೇ ಕುಲಜರು ಎಂದು ಹೇಳಿದ್ದಾರೆ.

ಕುಲಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಕೆರೆಯೊಳು ತಾವರೆ ಪುಟ್ಟಲು ಅದು ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೇಯೊಳಗೆ ಭೂಸುರರುಣ್ಣಲಿಲ್ಲವೆ

ಸತ್ಯವಂತರಾದ ಜನ ಕುಲವನ್ನು ನಂಬುವುದಿಲ್ಲ. ಕೆಸರಿನಲ್ಲಿ ಕಮಲ ಹುಟ್ಟಿ ಅರಳುತ್ತದೆ; ಅದರಂತೆ ಕೆಳ ಜಾತಿಯಲ್ಲಿ ವ್ಯಕ್ತಿ ಹುಟ್ಟಿ ತಮ್ಮ ವ್ಯಕ್ತಿತ್ವದ ಕಂಪನ್ನು ಸೂಸುತ್ತಾರೆ, ಕೆಸರಿನಲ್ಲಿ ಜನಿಸಿದ ಕಮಲ ದೇವರಿಗೆ ಅರ್ಪಿತವಾಗಬಹುದಾದರೆ, ಕೀಳು ಜಾತೆಯೆಂದು ಕರೆಸಿಕೊಂಡ ಜಾತಿಯಲ್ಲಿ ಹುಟ್ಟಿದವನು ಮೇಲೆ ಬರುವುದಿಲ್ಲವೇ? ಗೋವಿನ ಗರ್ಭದೊಳಗೆ ಉತ್ಪತ್ತಿಯಾಗುವ ಹಾಲನ್ನು ಮೇಲು ಜಾತಿಯವರು ಉಣ್ಣುವುದಿಲ್ಲವೆ? ಜಾತಿ ಸಿದ್ಧಾಂತದ ಪ್ರಕಾರ ಕೆಸರಿನಲ್ಲಿ ಹುಟ್ಟಿದ ಕಮಲ, ಮಾಂಸದಲ್ಲಿ ಉತ್ಪತ್ತಿಯಾಗುವ ಹಾಲು ಕೀಳಾಗಬೇಕಾಗಿತ್ತು. ಆದರೆ ಶ್ರೇಷ್ಠವಾದುದ್ದೇಕೆ? ಎಂಬ ಪ್ರಶ್ನೆ ಕನಕದಾಸರು ಕೇಳುತ್ತಾರೆ. ವ್ಯಕ್ತಿಯ ವ್ಯಕ್ತಿತ್ವವನ್ನು ನೋಡಬೇಕೆ ಹೊರತು ಅವನ ಜಾತಿಯನ್ನು ನೋಡಕೂಡದು, ಕನಕನ ಹಿರಿಮೆಯ ಕವಿತೆಯಲ್ಲಿ

ಕನಕದಾಸನ ಮೇಲೆ ದಯ ಮಾಡಲು ವ್ಯಾಸ
ಮುನಿ ಮಠಿಕರೆಲ್ಲರುವ ದೂರುತಿಹರೋ!
ನೋಡಿದರೆ ಈ ಕನಕನಾಡುವ ಮಾತುಗಳ
ಮೂಢಜನರರಿಯ ಬಲ್ಲರೆ ಮಹಿಮೆಯ
ನಾಡಾಡಿಯಂತೆಯೆ ಮಾಡಿಬಿಟ್ಟರು ಇವಗೆ
ನಾಡೆಲ್ಲ ಹುಡುಕಿದರು ಈಡಾರ ಕಾಣೆ

ಎಂಬ ಸಾಲುಗಳಲ್ಲಿ ಕನಕ ಪಂಡಿತನಾಗಿದ್ದರೂ ಮೇಲು ಜಾತಿಯ ಪಂಡಿತರು ಮಠಮಾನ್ಯಗಳ ಜನ ಅವನ ಬೆಳವಣಿಗೆಯನ್ನು ಸಹಿಸದೆ ಕೊರಗುತ್ತಿದ್ದರು. ಅಡ್ಡಗಾಲುಕಾಕಲು ಪ್ರಯತ್ನಿಸುತ್ತಿದ್ದರೆಂಬ ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಕನಕದಾಸರು ಉಡುಪಿಯ ಕೃಷ್ಣನನ್ನು ಕಾಣಲು ಹೋದಾಗ ವರ್ಣ ವ್ಯವಸ್ಥೆಯ ವಾರಸುದಾರರು ಅವರನ್ನು ಹೀನ ಜಾತಿಯವನೆಂದು ಒಳಗೆ ಬಿಡಲಿಲ್ಲ, ಈ ಕಳಂಕ ಚರಿತ್ರೆಯಲ್ಲಿ ಉಳಿಯಬಾರದೆಂದೇ ಕನಕನ ಕಿಂಡಿಯ ಕಟ್ಟುಕತೆಯನ್ನು ಕಟ್ಟಲಾಗಿದೆ. ದೇವರು ಕಿಂಡಿಯ ಮೂಲಕ ದರ್ಶನ ಕೊಡಲಿಲ್ಲ, ಸಂಪ್ರದಾಯದ ಜನ ಕಿಂಡಿಯ ಮೂಲಕ ದೇವರನ್ನು ನೋಡಲು ಅವಕಾಶ ಮಾಡಿಕೊಟ್ಟರು. ದೇವರು ಪ್ರತ್ಯಕ್ಷ ಆಗುವದಾಗಿದ್ದರೆ ಬಾಗಿಲಲ್ಲೇ ಆಗಬೇಕಾಗಿತ್ತು. ದೇವಾಲಯಕ್ಕೆ ಪ್ರವೇಶಾವಕಾಶ ದೊರಕದ ಹಿನ್ನೆಲೆಯಲ್ಲಿ ಕನಕದಾಸರಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ಕಳಕಳಿ ಸೃಷ್ಟಿಯಾದದ್ದು.

ಕುಲದ ಬಗೆಗೆ ಕನಕದಾಸರು ಎತ್ತುವ ಪ್ರಶ್ನೆ ಅಮೂರ್ತವಾದ ವೈಚಾರಿಕ ವಿಷಯದೊಂದಿಗೆ ವಾಸ್ತವದಾನುಭವದ ಹಿನ್ನೆಲೆಯಿಂದ ಹುಟ್ಟಿ ಬಂದುದಾಗಿದೆ. ಸ್ವಜಾತಿ ಹಾಗೂ ನಿಮ್ನ ಜಾತಿಗೆ ಸೇರಿದವರ ನಿಲುವುಗಳು ಅವರ ಬಹಳಷ್ಟು ಕೀರ್ತನೆಗಳಲ್ಲಿ ವ್ಯಕ್ತವಾಗಿವೆ. 'ನಾವು ಕುರುಬರು ನಮ್ಮ ದೇವರು ಬೀರಯ್ಯ । ಕಾವ ನಮ್ಮಜ್ಜ ನರಕುರಿಯ ಹಿಂಡುಗಳ' ಎನ್ನುವ ಕೀರ್ತನೆ ಕುಲಕಸುಬನ್ನೇ ಆಧ್ಯಾತ್ಮಿಕ ಸಾಧನೆಯ ನಿರಂತರ ಜಾಗೃತಿಗೆ ಸಾಕ್ಷಿಯಾಗಿದೆ. ಭಕ್ತ ಭಗವಂತನ ಸಂಬಂಧವನ್ನು ಕುರಿ ಕುರುಬನ ರೂಪದಲ್ಲಿದೆ. ಕನಕದಾಸರ ದೃಷ್ಟಿಯಲ್ಲಿ 'ಹೊಲೆಯ' ಎಂಬ ಪದ ಜಾತಿಕವಾಚಕವಲ್ಲ, ಕೃತವಾಚಕವಾಗಿದೆ. ಎಲ್ಲ ಬಲ್ಲೇವು ಎಂಬ ಮೇಲ್ವರ್ಗದವರ ನಡುವೆ ಕೆಳಜಾತಿಯ ವ್ಯಕ್ತಿಯೊಬ್ಬ ಸಂತಕವಿಯಾಗಿ ವರ್ಣಾಶ್ರಮದ ಕವಲುಗಳಾದ ಜಾತಿಯ ವಿರುದ್ಧ ಹೋರಾಟ ನಡೆಸುವ ಪರಿ ವಿನೂತನವಾದುದು.

ಎಳ್ಳು ಕಾಳಿನಷ್ಟು ಭಕುತಿಯೆನ್ನೊಳಗಿಲ್ಲ
ಕಳ್ಳರಿಗೆ ಕಳ್ಳನಂತೆ ಬೆಳಕ್ಕಿಯಂದದಿ ಡಂಭ
ಗಾಣದೆತ್ತಿನತೆ ಕಣ್ಣಮುಚ್ಚಿ ಪ್ರದಕ್ಷಿಣೆ ಮಾಡಿ
ಕಾಣದೆ ತಿರುಗುವನೆರಡು ಕಣ್ಣಿದ್ದು
ಮಾಣಿಕ್ಯದ ರಾಶಿಯಲ್ಲಿ ಅಂಧಕರೈವರು ಕೂಡಿ
ಆಣಿಮುತ್ತ ಹಿಡಿದು ಬಿಡುವ ಭ್ರಮಿತ ನಾನಯ್ಯಾ

'ಹ್ಯಾಂಗೆ ನೀ ದಾಸನಾದಿ' ಎಂಬ ಕೀರ್ತನೆಯಲ್ಲಿಯೂ ಸ್ವವಿಮರ್ಶೆ ಹಾಗೂ 'ದಾಸ' ಹೇಗಿರಬೇಕೆಂಬ ವಿಶ್ಲೇಷಣೆಯಿದೆ. ಸಂಸಾರಬಿಟ್ಟ ಸಾಮಾಜಿಕನಾಗದೆ, ಅತಿಯಾಸೆ ಬಿಡದೆ, ಹೊಟ್ಟೆ ಹೊರೆಯಲು ನೀಚರೆದುರಿಗೆ ಕೈವೊಡ್ಡುವವರೆಗೆ ಅವನು ದಾಸನಾಗುವುದಿಲ್ಲ, ದಾಸನಾಗುವ ತಯಾರಿ ಆಧ್ಯಾತ್ಮಕ್ಕೆ ಎಂತುಪಯುಕ್ತವೋ ಅಂತೆಯೇ ಇಹದ ಬದುಕಿಗೂ ಉಪಯುಕ್ತ, ಒಬ್ಬ ಅತ್ಯುತ್ತಮ ದಾಸ ಒಬ್ಬ ಅತ್ಯುತ್ತಮ ಸಂಸಾರಿಯೂ, ಒಬ್ಬ ಅತ್ಯುತ್ತಮ ಸಮಾಜ ಜೀವಿಯೂ ಎಂದು ಅರ್ಥೈಸಿದರೆ ತಪ್ಪಾಗಲಿಕ್ಕಿಲ್ಲ, ಈ ಹಿನ್ನೆಲೆಯಲ್ಲಿ ಕನಕದಾಸರು ಒಬ್ಬ ಶ್ರೇಷ್ಠ ಮಾನವ.

ಕನಕದಾಸರ ಕೀರ್ತನೆಗಳು ವ್ಯಕ್ತಿನಿಷ್ಠವೆನಿಸಿ ಹೆಚ್ಚು ಭಾವಗೀತಾತ್ಮಕವೊ, ಜಾನಪದ ಸೊಗಡಿನಿಂದ ಕೂಡಿದವುಗಳೂ ಆಗಿರುವುದರಿಂದ ಶ್ರೋತೃಗಳ ಮನದಾಳದಲ್ಲಿ ಅಚ್ಚೊತ್ತಿದಂತಹ ಪ್ರಭಾವವನ್ನು ಬೀರುವುದು ಸರ್ವವಿದಿತವೆನಿಸಿದೆ. ಗಹನವಾದ ತತ್ವವನ್ನು ಸರಳವಾದ ಮಾತುಗಳಲ್ಲಿ ಹೇಳುವುದೇ ದಾಸ ಸಾಹಿತ್ಯದ ವೈಶಿಷ್ಟ್ಯ ಎಂದು ಹೇಳಿರುವ ಡಾ॥ಜಿ, ವರದರಾಜರಾವ ಅವರ ಮಾತು ಕನಕದಾಸರ ಕೀರ್ತನೆಗಳಲ್ಲಿ ನಿಚ್ಚಳವಾಗಿ ಗೋಚರಿಸುವುದು ಕೀರ್ತನೆಗಳಲ್ಲಿ ಬಳಸಿರುವ ಮಾರ್ಮಿಕವಾದ ಒಂದೊಂದು ಮಾತಿನ ತುಣುಕೂ ಗಪ್ಪನೆ ಹಿಡಿದುಕೊಳ್ಳುವ ನಾಣ್ಣುಡಿಗಳಂತಿವೆ ಎಂದರೆ ಉತ್ಪ್ರೇಕ್ಷೆಯೇನಲ್ಲ.

'ಮಾಯೆ ನಿನ್ನೊಳಗೋ? ನಿನ್ನೊಳಗೆ ಮಾಯೆಯೋ? ಸಕ್ಕರೆಯೊಳಗೆ ಸವಿಯೋ? ಸವಿಯೊಳಗೆ ಸಕ್ಕರೆಯೋ?' ಎಂದು ಎಂಥವರನ್ನೂ ಕೆಣಕಿ ತಿಣುಕುವಂತೆ ಮಾಡುವ ಆಧ್ಯಾತ್ಮಪರ ಪ್ರಶ್ನೆಗಳಿಗೆ ಅವರೇ 'ಎಲ್ಲವೂ ನಿನ್ನೊಳಗೋ ಹರಿಯೆ' ಎಂಬುದಾಗಿ ಉತ್ತರಿಸಿ ಎಲ್ಲರೂ ಸಮಾಧಾನದ

ನಿಟ್ಟುಸಿರುಬಿಡುವಂತೆ ಮಾಡಿರುವ ಮಾತಿನ ಧಾಟಿ ಮೆಚುವಂತಹುದು ಮಾತ್ರವೇ ಅಲ್ಲ ಅಚ್ಚರಿ ಹುಟ್ಟಿಸುವಂತಹದೂ ಆಗಿದೆ. ಸಮಾಜದ ವಕ್ರತೆಯನ್ನು ತಿದ್ದಿ ಮೇಲೆತ್ತುವ ಕಾರ್ಯವನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ಲಘು ಹಾಸ್ಯದಿಂದ ಕೂಡಿದ ವಿಡಂಬನೆಗಳ ಮೂಲಕ ಸಾಧಿಸಿರುವರು. ನೈತಿಕ ನೆಲೆಗಟ್ಟನ್ನು ಹಾಕಿ ಆಧ್ಯಾತ್ಮಿಕ ಸೌಧವನ್ನು ಸಂತರು ನಿಮಿಸಿದರು. ಆಸೆಯನ್ನು ಜಯಿಸಿ ಹರಿದಾಸರಾದರು. ಅವರು ಅಂದೂ ಸ್ವಾರ್ಥಕ್ಕಾಗಿ ತಲೆ ಕೆಡಿಸಿಕೊಂಡಿಲ್ಲ, ನಿರಾಡಂಬರತೆ ಅವರ ಬಾಳಿನ ಸೂತ್ರವಾಗಿತ್ತು, ಸಾಮಾಜಿಕ ಡಾಂಭಿಕತೆಯನ್ನು ಅವರು ಆಗಾಗ ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಸಮಾಜದ ಶುಚಿಗೆ ಇವರ ಕೊಡುಗೆ ಅಪಾರ.

ನ್ಯಾಯವ ಬಿಟ್ಟು ಅನ್ಯಾಯವ
ಪೇಳುವ ನಾಯಿಗೆ ನರಕವು ತಪ್ಪಿತೆ॥
ಡೊಂಕು ಬಾಲದ ನಾಯಕರೆ
ನೀವೇನೂಟ ಮಾಡಿದಿರಿ
ಕಣಕ ಕುಟ್ಟೋ ಅಲ್ಲಿಗೆ ಹೋಗಿ
ಹಣಕಿ ಇಣಕಿ ನೋಡುವಿರಿ
ಕಣಕ ಕುಟ್ಟೋ ಒನಕಲಿ ಹೊಡೆದರೆ
ಕುಂಯಿ ಕುಂಯಿ ರಾಗವ ಪಾಡುವಿರಿ॥

ಈ ಹಾಡು ಮನುಷ್ಯನ ಚಪಲತೆ, ಚಂಚಲತೆ, ಆತ್ಮಾಭಿಮಾನ ರಹಿತ ನಡತೆಯನ್ನು ಮನಮುಟ್ಟುವಂತೆ ಸೆರೆಹಿಡಿದಿದೆ, ಈ ಬಗೆಯ ಕೀರ್ತನೆಗಳಲ್ಲಿ ಕನಕದಾಸರು ಮನುಷ್ಯನನ್ನು ನಾಯಿಯೊಂದಿಗೆ ಹೋಲಿಸಿರುವುದು ಸ್ವಾರಸ್ಯಪೂರ್ಣವಾಗಿದೆ. ನಾಯಿ ಜನಪದರ ದೃಷ್ಟಿಯಲ್ಲಿ ನಾರಾಯಣವೂ ಹೌದು, ಪ್ರಾಮಾಣಿಕತೆಗೆ ಹೆಸರುವಾಸಿಯೂ ಹೌದು, ಅದನ್ನು ಪಲ್ಲಕ್ಕಿಯಲ್ಲಿ ಕೂಡಿಸಿದಿರೂ ಹೊಲಸು ಕಂಡಲ್ಲಿ ಧುಮುಕುವ ಚಂಚಲತೆ ತೋರುತ್ತದೆ. ಹೀಗೆಯೇ ಮಾನವ ಚೇತನಮಯಿಯಾದಾಗ ಮನುಷ್ಯತ್ವದಿಂದ ದೈವತ್ವವನ್ನು ಸಂಪಾದಿಸಬಲ್ಲನು. ಅಧೋಗಾಮಿಯಾದಾಗ ಮನುಷ್ಯತ್ವದಿಂದ ದೂರ ನಡೆದು ದುಷ್ಟನಾಗಬಲ್ಲನು. ಕನಕದಾಸರು ಹೀಗೆ ಏಕಕಾಲದಲ್ಲಿ ಒಂದೇ ಪದದಲ್ಲಿ ಜೀವನದ ಎರಡು ಮುಖವನ್ನು ದರ್ಶಿಸುವ ಸಂಕೇತಿಸುವ ರೀತಿ ಮನೋಜ್ಞವಾಗಿದೆ.

ದೈವಕೃಪೆಗೆ ಪಾತ್ರರಾದ ವಿರಳ ಸಂತ ವಿಭೂತಿಗಳಲ್ಲಿ ಕನಕದಾಸರು ಒಬ್ಬರು. ದಾಸ ಪಂಥದ ಸಾಧಕರ ಸಾಧನೆಗಿಂತ ಇವರ ಸಾಧನೆ ಭಿನ್ನವಾದುದು. ಮತೀಯ ಕೂಪ ಮಂಡೂಕತನವನ್ನು ಮೀರಿನಿಂತ ಕನಕದಾಸರ ವ್ಯಕ್ತಿತ್ವ ಸಹಸ್ರದಳದ ಕಮಲದಂತೆ ಅರಳಿ ಸಮಾಜವನ್ನು ಆಕರ್ಷಿಸಿತು, ಬಾಹ್ಯಾಡಂಬರವನ್ನು ಕನಕದಾಸರು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಇವರ ಕೀರ್ತನೆಗಳಲ್ಲಿ ಕಂಡುಬರುವ ವಿಡಂಬನೆಯೇ ಒಂದು ತೂಕವಾದರೆ ವಿಡಂಬನೆಯ ಕೃತಿಯೆಂದೇ ಹೆಸರಾಗಿರುವ 'ರಾಮಧ್ಯಾನ ಚರಿತ್ರೆ'ಯು ಇನ್ನೊಂದು ತೂಕ, ತಾವು ಬದುಕನ್ನು ಕಂಡುಂಡ ಬಗೆಯನ್ನು ಬಣ್ಣಿಸುತ್ತಾರೆ. ಹಾಗೆ ಮಾಡುವಾಗಲೆಲ್ಲಾ ಅವರ ಮಾತುಗಳಲ್ಲಿ ಅಭಿವ್ಯಕ್ತಿಯಲ್ಲಿ ವಿಡಂಬನೆ ಹಾಸು ಹೊಕ್ಕಾಗಿರುವುದು ಗೋಚರವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ವಿಡಂಬನಾತ್ಮಕ ಕೀರ್ತನೆಗಳಲ್ಲಿ ಕನಕದಾಸರು ತಮ್ಮ ಸಮಕಾಲೀನ ಸಮಾಜದ ಅನಿಷ್ಟಗಳನ್ನು ಖಂಡಿಸಿದ್ದಾರೆ. ಅಂತರಂಗದ ಶುದ್ಧೀಕರಣವನ್ನು ನಿರ್ಲಕ್ಷಿಸಿ ಕೇವಲ ಬಾಹ್ಯನಿಧಿಗಳನ್ನು ಪಾಲಿಸುವುದು, ಔತೀಯತೆ ಮತ್ತು ಮಡಿವಂತಿಕೆಯಲ್ಲಿ ತೊಡಗಿರುವ ಜನರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಒಂದು ಕೀರ್ತನೆಯಲ್ಲಿ, ಅವರು ಸಂಪ್ರದಾಯವಾದಿಗಳು ಯಾಂತ್ರಿಕವಾಗಿ ಯಜ್ಞ–ಯಾದಿಗಳನ್ನು ಮಾಡುತ್ತಲಿದ್ದರೂ ಅಂತರಂಗದಲ್ಲಿ ಮೋಸ ಮತ್ತು ಕುಹಕತನಗಳನ್ನು ತುಂಬಿಕೊಂಡವರನ್ನು ಖಂಡಿಸುತ್ತಾರೆ. ಅವರ ಇನ್ನೊಂದು ಕೀರ್ತನೆಯಲ್ಲಿ ಜನರ ಜಾತಿಯತೆಯನ್ನು ಕಂಡು ನೊಂದುಕೊಂಡು ಅದನ್ನು ಹೋಗಲಾಡಿಸುವಂತೆ ನಿವೇದಿಸಿಕೊಳ್ಳುತ್ತಾರೆ.

ಮೇಲು– ಕೀಳೆಂಬುದನ್ನು ಜಾತಿ–ವಿಜಾತಿಗಳೆಂಬ ಕೃತಕ ಅಂತರಂಗಗಳನ್ನೂ ದಾಸರು ಮನ್ನಿಸಲಿಲ್ಲ, ಅವರು ಗುಣದಿಂದ ಹೊಲೆತನವನ್ನು ಅಳೆದರು, ಮುಕ್ತಿ ಸಂಪಾದನೆಯೊಂದೇ ಮುಖ್ಯವಾಗಿದ್ದರೂ ಅದರ ಸಮ ಸಮವಾಗಿ ಸಾಮಾಜಿಕ ಪರಿವರ್ತನೆ ಯಾಗಬೇಕೆಂಬುದು ಅವರ ಮೂಲ ಮಂತ್ರವಾಗಿತ್ತು. ಜಾತಿ ಕುಲಗಳಿಗಿಂತ ಸರ್ವಮತ ಸಮಾನತೆ ಹಾಗೂ ಸಮಾಜದ ಹಿತಚಿಂತನೆ ಮುಖ್ಯವೆಂದು ನಂಬಿದ್ದರು, ತಮ್ಮ ಅನುಭವಕ್ಕೆ ಕಂಡ ಸತ್ಯವನ್ನು ಯಾರ ಹಂಗೂ ಇಲ್ಲದೆ ನಿರ್ಭಿಡೆಯಿಂದ ಹೇಳಿದರು. ಕನಕದಾಸರು ಕನ್ನಡ ಸಾಹಿತ್ಯದ ದೀಪ, ಕನ್ನಡ ಸಂಸ್ಕೃತಿಯು ಅವರ ಕೀರ್ತನೆಗಳಲ್ಲಿ ಮನೆ ಮಾಡಿದೆ. ದೇಸಿ ಭಾಷೆಯಲ್ಲಿ ಅವರ ಸಾಹಿತ್ಯ ರಚನೆಯಾಗಿ ಜನರ ಮನದಲ್ಲಿ ಚಿರಸ್ಥಾಯಿಯಾಗಿದೆ